## ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ : ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ,

ಹಳೆಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು–560038

ದೂರವಾಣಿ: (080) 25196124-29 ಇ-ಮೇಲ್: info@kuidfc.com ವೆಬ್ ಸೈಟ್ – www.kuidfc.com

ಸಂ. ಕೆಯುಐಡಿಎಫ್‌ಸಿ/ಕೆಯುಡಬ್ಲ್ಯೂಎಸ್ಎಮ್‌ಪಿ/1685/2020-21 ದಿನಾಂಕ :09.06.2020

### ನೇಮಕಾತಿ ಪ್ರಕಟಣೆ

1. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ ವಿಶ್ವ ಬ್ಯಾಂಕ್ ನೆರವಿನ **"ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"** (KUWSMP) ಯಡಿ ಯೋಜನಾ ಮೇಲ್ವಿಚಾರಣಾ ಘಟಕ, ಕೇಂದ್ರ ಕಛೇರಿ, ಬೆಂಗಳೂರು ಹಾಗೂ ಯೋಜನಾ ಅನುಷ್ಠಾನ ಘಟಕ, ಹುಬ್ಬಳ್ಳಿ, ಬೆಳಗಾವಿ ಹಾಗೂ ಕಲಬುರ್ಗಿ ನಗರಗಳಲ್ಲಿ ಖಾಲಿ ಇರುವ ತಾಂತ್ರಿಕ ಹಾಗೂ ತಾಂತ್ರಿಕೇತರ ಒಟ್ಟು 47 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ (ಪ್ರತಿ ವರ್ಷ ಗುತ್ತಿಗೆ ನವೀಕರಣಕ್ಕೊಳಪಟ್ಟು) ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ online ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**2. ಹುದ್ದೆಗಳ ವಿವರ :**

| ಕ್ರ ಸಂ | ಹುದ್ದೆ POSTS | ಕರ್ತವ್ಯ ಸ್ಥಳ | | | | | ಒಟ್ಟು |
|---|---|---|---|---|---|---|---|
| | | ಪಿ.ಎಂ.ಯು/ ಕೇಂದ್ರ ಕಛೇರಿ ಬೆಂಗಳೂರು | ಪ್ರಾದೇಶಿಕ ಕಛೇರಿ ಹುಬ್ಬಳ್ಳಿ | ಯೋ.ಅ.ಘ. ಹುಬ್ಬಳ್ಳಿ | ಯೋ.ಅ.ಘ. ಬೆಳಗಾವಿ | ಯೋ.ಅ.ಘ. ಕಲಬುರ್ಗಿ | |
| 1 | ಅಧೀಕ್ಷಕರ ಅಭಿಯಂತರರು Superintending Engineer | 01 | – | 01 | 01 | – | 03 |
| 2 | ಕಾರ್ಯನಿರ್ವಾಹಕ ಅಭಿಯಂತರರು (ಸಿವಿಲ್) Executive Engineer (Civil) | – | 01 | – | – | 01 | 02 |
| 3 | ಕಾರ್ಯನಿರ್ವಾಹಕ ಅಭಿಯಂತರರು (ಇಲೆಕ್ಟ್ರಿಕಲ್) Executive Engineer (Electrical) | – | – | 01 | – | – | 01 |
| 4 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಸಿವಿಲ್) Assistant Executive Engineer (Civil) | – | 01 | – | – | 01 | 02 |
| 5 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಇಲೆಕ್ಟ್ರಿಕಲ್) Assistant Executive Engineer (Electrical) | – | – | 01 | – | 01 | 02 |
| 6 | ಸಹಾಯಕ ಅಭಿಯಂತರರು (ಸಿವಿಲ್) Assistant Engineer (Civil) | 01 | 01 | 03 | 03 | 01 | 09 |
| 7 | ಸಹಾಯಕ ಅಭಿಯಂತರರು (ಇಲೆಕ್ಟ್ರಿಕಲ್) Assistant Engineer (Electrical) | 01 | – | 01 | 01 | – | 03 |
| 8 | ಎಂ ಐ ಎಸ್ ಎಕ್ಸ್‌ಪರ್ಟ (ಎಂ & ಇ) MIS Expert (M&E) | 01 | – | – | – | – | 01 |
| 9 | ವ್ಯವಸ್ಥಾಪಕರು Manager | | | 01 | 01 | 01 | 03 |
| 10 | ವ್ಯವಸ್ಥಾಪಕರು (ಹಣಕಾಸು)/ ಹಣಕಾಸು ಪರಿಣಿತರು Manager Finance/Finance Expert | 01 | – | – | –– | – | 01 |
| 11 | ಲೆಕ್ಕಪತ್ರ ಅಧೀಕ್ಷಕರು/ ಲೆಕ್ಕಪತ್ರ ಅಧಿಕಾರಿ Accounts Officer/ Account Supdt. | – | 01 | 01 | 01 | 01 | 04 |

| ಕ್ರ ಸಂ | ಹುದ್ದೆ POSTS | ಕರ್ತವ್ಯ ಸ್ಥಳ | | | | | ಒಟ್ಟು |
|---|---|---|---|---|---|---|---|
| | | ಪಿ.ಎಂ.ಯು/ ಕೇಂದ್ರ ಕಛೇರಿ ಬೆಂಗಳೂರು | ಪ್ರಾದೇಶಿಕ ಕಛೇರಿ ಹುಬ್ಬಳ್ಳಿ | ಯೋ.ಅ.ಘ. ಹುಬ್ಬಳ್ಳಿ | ಯೋ.ಅ.ಘ. ಬೆಳಗಾವಿ | ಯೋ.ಅ.ಘ. ಕಲಬುರ್ಗಿ | |
| 12 | ಸಾರ್ವಜನಿಕ ಸಂಪರ್ಕ ಅಧಿಕಾರಿ Public Relation Officer | – | – | 01 | 01 | 01 | 03 |
| 13 | ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಹಾಗೂ ಸಮುದಾಯ ಅಭಿವೃದ್ದಿ ಪರಿಣಿತರು IEC cum Community Dev. Speceialist. | – | – | – | 01 | 01 | 02 |
| 14 | ಸಾಮಾಜಿಕ ಅಭಿವೃದ್ಧಿ ಮತ್ತು ಎಂ & ಇ ಪರಿಣಿತ (ಸೋಷಿಯಲ್ ಡೆವಲಪ್ಮೆಂಟ್/ಎಂ & ಇ ಸ್ಪೆಷಲಿಸ್ಟ್) Social Development cum M&E Specialist | – | – | – | 01 | 01 | 02 |
| 15 | ಲೆಕ್ಕ ಸಹಾಯಕರು Accounts Assistant | – | – | 01 | 01 | – | 02 |
| 16 | ಡಿ.ಇ.ಓ. / ಕಂಪ್ಯೂಟರ್ ಆಪರೇಟರ್ Computer Operator | – | 02 | 02 | 02 | 01 | 07 |
| | **ಒಟ್ಟು** | **05** | **06** | **13** | **13** | **10** | **47** |

## 3. ವೇತನ ಮತ್ತು ಭತ್ಯೆಗಳು / Pay and Allowances:-

ನಿಗಮದ ಮಾನವ ಸಂಪನ್ಮೂಲ ನಿಯಮಾವಳಿಗಳ ಅನ್ವಯ ಹುದ್ದೆಗಳಿಗೆ ನಿಗದಿಪಡಿಸಲಾಗಿರುವ ದರ್ಜೆಗೆ ಅನ್ವಯವಾಗುವ ವೇತನ ಮತ್ತು ಭತ್ಯೆಗಳಿಗೆ ಅರ್ಹರಾಗಿರುತ್ತಾರೆ.

| ಕ್ರಸ | ಹುದ್ದೆ | ಹುದ್ದೆಗೆ ಅನ್ವಯವಾಗುವ ದರ್ಜೆ | ವೇತನ ** |
|---|---|---|---|
| 1 | ಅಧೀಕ್ಷಕ ಅಭಿಯಂತರರು Superintending Engineer | ಪ್ರಧಾನ ವ್ಯವಸ್ಥಾಪಕರು– G M | 74,400 |
| 2 | ಕಾರ್ಯಪಾಲಕ ಅಭಿಯಂತರರು Executive Engineer | ಉಪ ಪ್ರಧಾನ ವ್ಯವಸ್ಥಾಪಕರು–DGM | 56,800 |
| 3 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು Assistant Executive Engineer (Civil) | ಸಹಾಯಕ ಪ್ರಧಾನ ವ್ಯವಸ್ಥಾಪಕರು AGM | 52,650 |
| 4 | ಎಂ ಐ ಎಸ್ ಎಕ್ಸ್‌ಪರ್ಟ್ (ಎಂ & ಇ) ವ್ಯವಸ್ಥಾಪಕರು , ವ್ಯವಸ್ಥಾಪಕರು (ಹಣಕಾಸು), ಹಣಕಾಸು ಪರಿಣಿತರು, ಸಾರ್ವಜನಿಕ ಸಂಪರ್ಕ ಅಧಿಕಾರಿ, ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಹಾಗೂ ಸಮುದಾಯ ಅಭಿವೃದ್ದಿ ಪರಿಣಿತರು, ಸಾಮಾಜಿಕ ಅಭಿವೃದ್ಧಿ ಮತ್ತು ಎಂ & ಇ ಪರಿಣಿತ MIS Expert /Manager/Manager (Fin)/ Finance Expert/ PRO/IEC Specialist | ವ್ಯವಸ್ಥಾಪಕರು / Manager | 45,300 |
| 5 | ಸಹಾಯಕ ಅಭಿಯಂತರರು Assistant Engineer | ಉಪ ವ್ಯವಸ್ಥಾಪಕರು Deputy .Manager | 43,100 |
| 6 | ಲೆಕ್ಕಪತ್ರ ಅಧೀಕ್ಷಕರು/ ಲೆಕ್ಕಪತ್ರ ಅಧಿಕಾರಿ , ಸಹಾಯಕ ವ್ಯವಸ್ಥಾಪಕರು | ಸಹಾಯಕ ವ್ಯವಸ್ಥಾಪಕರು Asst.Manager | 40,900 |

| ಕ್ರಸ | ಹುದ್ದೆ | ಹುದ್ದೆಗೆ ಅನ್ವಯವಾಗುವ ದರ್ಜೆ | ವೇತನ ** |
|---|---|---|---|
| | Accounts Supdt./Accounts Officer/ Astt. Manager | | |
| 7 | ಲೆಕ್ಕ ಸಹಾಯಕರು<br>Accounts Assistant | ಕಾರ್ಯನಿರ್ವಾಹಕ ಸಹಾಯಕರು,<br>Executive Assistant | 27,650 |
| 8 | ಕಿರಿಯ ಕಾರ್ಯನಿರ್ವಾಹಕ ಸಹಾಯಕರು,<br>ಕಂಪ್ಯೂಟರ್ ಆಪರೇಟರ್<br>Junior Executive Assistant/ Computer Operator | ಕಿರಿಯ ಕಾರ್ಯನಿರ್ವಾಹಕ ಸಹಾಯಕರು/<br>Junior Executive Assistant | 21,400 |

** ನಿಗದಿಪಡಿಸಲಾಗಿರುವ ಮೂಲ ವೇತನದೊಂದಿಗೆ ಎಚ್.ಆರ್. ಪಾಲಿಸಿ ನಿಯಮಗಳ ಪ್ರಕಾರ ಅನ್ವಯವಾಗುವ ಭತ್ಯೆಗಳನ್ನು ಸೇರಿಸಿ ಕ್ರೋಢೀಕೃತ ವೇತನ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಲಾಗುವುದು.

**4. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು :**

| ಪ್ರಾರಂಭಿಕ ದಿನಾಂಕ | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ |
|---|---|
| 11/06/2020 | 25/06/2020 |

**5. ಅರ್ಜಿಗಳನ್ನು ಸಲ್ಲಿಸುವ ವಿಧಾನ :–**

ಅರ್ಜಿಗಳನ್ನು online ಮೂಲಕವೇ ಭರ್ತಿ ಮಾಡಿ, ಭಾವಚಿತ್ರ ಸಹಿಯೊಂದಿಗೆ, ವಯೋಮಿತಿ, ವಿದ್ಯಾರ್ಹತೆ, ಅನುಭವ, ಮೀಸಲಾತಿ, ಕನ್ನಡ ಭಾಷಾ ಜ್ಞಾನ ಇತ್ಯಾಧಿಗಳಿಗೆ ಸಂಬಂಧಿಸಿದ ಎಲ್ಲಾ ಸ್ಪಷ್ಟ ದಾಖಲೆಗಳನ್ನು ಅಪ್ಲೋಡ್ ಮಾಡಬೇಕು. ಅಪೂರ್ಣ/ ಅಸ್ಪಷ್ಟ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗದಿತ ಸಮಯದಲ್ಲಿ online ನಲ್ಲಿ ಅರ್ಜಿ ಸಲ್ಲಿಸಲು ವಿಫಲವಾದಲ್ಲಿ ನಿಗಮವು ಹೊಣೆಗಾರವಾಗುವುದಿಲ್ಲ. ಅರ್ಜಿಗಳನ್ನು ಅಂಚೆ/ಕೊರಿಯರ್ ಮೂಲಕ ಅಥವಾ ನೇರವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು ಹಾಗೂ ಯಾವುದೇ ಹಂತದಲ್ಲಿಯಾಗಲಿ ನ್ಯೂನತೆಗಳು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**6. <u>ಅರ್ಜಿ ಸಲ್ಲಿಸಲು ವಿಶೇಷ ಸೂಚನೆ :–</u>**

- ಒಬ್ಬ ಅಭ್ಯರ್ಥಿಯು ಒಂದು ಹುದ್ದೆಗೆ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸತಕ್ಕದ್ದು.
- ನೇಮಕಾತಿಗೆ ಸಂಬಂಧಿಸಿದಂತೆ ನಿಗಮದ ಅಂತರ್ಜಾಲ www.kuidfc.com/Careers" ದಲ್ಲಿ ಲಭ್ಯವಿರುವ ಸೂಚನೆಗಳಂತೆ ಅರ್ಜಿಗಳನ್ನು ಸಲ್ಲಿಸುವುದು.
- ಅರ್ಜಿಗಳಲ್ಲಿ ಅಧಿಕೃತ ಇ–ಮೇಲ್ ವಿಳಾಸ/ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ತಪ್ಪದೇ ನಮೂದಿಸುವುದು. ಯಾವುದೇ ತಪ್ಪು ಮಾಹಿತಿಯನ್ನು ನೀಡದೇ ಆನ್ ಲೈನ್‌ನಲ್ಲಿ ನೀಡಲಾಗಿರುವ ಅರ್ಜಿ ನಮೂನೆಯಲ್ಲಿ ಮಾತ್ರ ವಿವರಗಳನ್ನು ಭರ್ತಿ ಮಾಡತಕ್ಕದ್ದು.
- ಒಂದು ವೇಳೆ ತಪ್ಪು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹವರ ವಿರುದ್ಧ ನಿಗಮವು ಕಾನೂನಿನನ್ವಯ ನೇಮಕಾತಿಯ ಯಾವ ಹಂತದಲ್ಲಿಯಾದರೂ ಸೂಕ್ತ ಕ್ರಮಕೈಗೊಳ್ಳುವುದು ಹಾಗೂ ಅರ್ಜಿಯನ್ನು ತಿರಸ್ಕರಿಸಲಾಗುವುದು.

- ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ. ಯಾವುದೇ ಕಾರಣಕ್ಕೂ ಈ ಸಂಸ್ಥೆಯಿಂದ ನಕಲು ಪ್ರತಿ ಪಡೆಯಲು ಅವಕಾಶ ಇರುವುದಿಲ್ಲ.

7. **<u>ನೇಮಕಾತಿಯಲ್ಲಿ ಆದ್ಯತೆ:-</u>**

- ಸರ್ಕಾರಿ ಕಛೇರಿ/ನಿಗಮ/ಮಂಡಳಿಗಳಲ್ಲಿ ಕೆಲಸ ನಿರ್ವಹಿಸಿದ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯಲ್ಲಿ ಈ ಮೊದಲು ಕಾರ್ಯನಿರ್ವಹಿಸಿ ಅನುಭವ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**ವಿಶೇಷ ಸೂಚನೆ :ಪದವಿ/ಸ್ನಾತಕೋತ್ತರ/ಇಂಜಿನಿಯರಿಂಗ್ ಇತ್ಯಾಧಿ ವಿಧ್ಯಾಭ್ಯಾಸಗಳಿಗೆ ಸಂಬಂಧಿಸಿದ ಅಂಕಪಟ್ಟಿ/ ಪದವಿ ಪತ್ರಗಳ ನೈಜತೆಯ ಪರಿಶೀಲನೆಗಾಗಿ ಸಂಬಂಧಿಸಿದ ವಿಶ್ವವಿಧ್ಯಾನಿಲಯಗಳಿಗೆ ಕಳುಹಿಸಲಾಗುವುದು ಹಾಗೂ ಪರಿಶೀಲನಾ ವೆಚ್ಚವನ್ನು ಆಯ್ಕೆಯಾದ ಅಭ್ಯರ್ಥಿಗಳು ಭರಿಸತಕ್ಕದ್ದು.**

8. **<u>ಅರ್ಹತಾ ಷರತ್ತುಗಳು :-</u>**

- ಭಾರತೀಯ ನಾಗರೀಕನಾಗಿರತಕ್ಕದ್ದು.
- ಕನ್ನಡ ಭಾಷಾಜ್ಞಾನ, ಕನ್ನಡದಲ್ಲಿ ಮಾತನಾಡುವುದು, ಬರೆಯುವುದು, ಓದುವುದು ಅತ್ಯವಶ್ಯಕ.
- ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟುಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
- ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ನಿಗಮವು ಕಾಯ್ದಿರಿಸಿಕೊಂಡಿದೆ.
- ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗದಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.
- ನಿವೃತ್ತ ಸರ್ಕಾರಿ ಅಧಿಕಾರಿಗಳನ್ನು ಅವರು ನಿವೃತ್ತಿ ಹೊಂದಿದ ವೃಂದದ ಸಮಾನಾಂತರ ಹುದ್ದೆಗೆ ನೇಮಕಾತಿ ಮಾಡಲಾಗುವುದು.

09. <u>ವಯೋಮಿತಿ :-</u>

- ಗರಿಷ್ಠ 63 ವರ್ಷಗಳು,

10. <u>ನೇಮಕಾತಿ ವಿಧಾನ :-</u>

- ವಿದ್ಯಾರ್ಹತೆ, ಮೆರಿಟ್, ಅನುಭವದ ಆಧಾರದ ಮೇಲೆ ಮೌಖಿಕ ಸಂದರ್ಶನ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

11. **ಪ್ರಮುಖ ಸೂಚನೆಗಳು :-**

- ಹುದ್ದೆಗಳ ವರ್ಗೀಕರಣದನ್ವಯ ಯೋಜನಾವಾರು ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹಾಗೂ ನೇಮಕಾತಿ ಅಧಿಸೂಚನೆಯನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಹಾಗೂ ಹೊಸ ಅಧಿಸೂಚನೆಯನ್ನು ಪ್ರಕಟಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
- ಖಾಲಿ ಹುದ್ದೆಗಳಿಗೆ ನೇಮಕಾತಿಯು ಕೇವಲ ತಾತ್ಕಾಲಿಕವಾಗಿದ್ದು ಖಾಯಂ ನೇಮಕಾತಿಯಾಗಿರುವುದಿಲ್ಲ, ಯೋಜನಾ ಅನುಷ್ಠಾನದ ಅವಧಿಯವರೆಗೆ ಮಾತ್ರ ಸೀಮಿತವಾಗಿರುತ್ತವೆ. ಯೋಜನೆ ಮುಕ್ತಾಯಗೊಂಡ ನಂತರ ಹುದ್ದೆಗಳು ಸ್ವಯಂಚಾಲಿತವಾಗಿ ರದ್ದಾಗುತ್ತದೆ.
- ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಹೆಚ್.ಆರ್ ಪಾಲಿಸಿ ಅನ್ವಯ ಒಂದು ವರ್ಷದ ಅವಧಿಗೆ (ಪ್ರತಿ ವರ್ಷದ ಕಾರ್ಯಸಾಧನೆಯ ಆಧಾರದನ್ವಯ ನವೀಕರಣಕ್ಕೊಳಪಟ್ಟು) ನೇಮಕ ಮಾಡಿಕೊಳ್ಳಲಾಗುತ್ತದೆ.
- ನೇಮಕಾತಿ ಪ್ರಕ್ರಿಯೆ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
- ಈಗಾಗಲೇ ಕೆ.ಯು.ಐ.ಡಿ.ಎಫ್.ಸಿ. ನಿಗಮದ ಇತರೆ ಯೋಜನೆಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿಗೆ ಅರ್ಜಿ ಸಲ್ಲಿಸಿ, ನೇಮಕಗೊಂಡಲ್ಲಿ ಸದರಿ ನೇಮಕಾತಿಗಳನ್ನು ಹೊಸ ನೇಮಕಾತಿ ಎಂದು ಪರಿಗಣಿಸಲಾಗುವುದು.
- ಅಭ್ಯರ್ಥಿಗಳು ಸಾರ್ವಜನಿಕ ಉದ್ಯೋಗ ನಿಯಮಗಳಲ್ಲಿ ಉಲ್ಲೇಖಿಸಿದ ಎಲ್ಲ ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು.
- ಸಂದರ್ಶನದ ಸಮಯದಲ್ಲಿ ಅರ್ಜಿಯೊಂದಿಗೆ ಸಲ್ಲಿಸಿದ ಎಲ್ಲ ಪ್ರಮಾಣ ಪತ್ರಗಳ ಮೂಲಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ.

12. **<u>ದುರ್ನಡತೆ :-</u>**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡು ಬಂದಲ್ಲಿ ಅಂತಹ ಅಭ್ಯಥಿಗಳನ್ನು ಹುದ್ದೆಯ ಸಂದರ್ಶನ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

13. **ಶೈಕ್ಷಣಿಕ ವಿದ್ಯಾರ್ಹತೆ/ಅನುಭವ /ಕಾರ್ಯಸ್ಥಳ/ಕರ್ತವ್ಯಗಳ ವಿವರ** “www.kuidfc.com/Careers” **ದಲ್ಲಿ ಲಭ್ಯವಿರುತ್ತದೆ.**

**ಸಹಿ /-**

**ವ್ಯವಸ್ಥಾಪಕ ನಿರ್ದೇಶಕರು,**

**ಕೆ.ಯು.ಐ.ಡಿ.ಎಫ್.ಸಿ. ಬೆಂಗಳೂರು.**